ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1694**
ಮಾನ್ಯ ಸದಸ್ಯರ ಹೆಸರು	:	**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
ಉತ್ತರಿಸಬೇಕಾದ ದಿನಾಂಕ	:	**14.03.2022**
ಉತ್ತರಿಸಬೇಕಾದ ಸಚಿವರು	:	**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

ಕ್ರ ಸಂ	ಪ್ರಶ್ನೆಗಳು	ಉತ್ತರ
ಅ)	ಕೋಲಾರ ಜಿಲ್ಲೆಯಲ್ಲಿ ಕಳೆದೆರಡು ವರ್ಷಗಳಲ್ಲಿ ಎಷ್ಟು ಆಸ್ಪತ್ರೆಗಳಿಗೆ ವೆಂಟಿಲೇಟರ್ ವ್ಯವಸ್ಥೆ ಕಲ್ಪಿಸಲಾಗಿದೆ. (ಆಸ್ಪತ್ರೆವಾರು ವಿವರ ನೀಡುವುದು)	ಕೋಲಾರ ಜಿಲ್ಲೆಯಲ್ಲಿ ಕಳೆದ 02 ವರ್ಷಗಳಲ್ಲಿ ಆಸ್ಪತ್ರೆಗಳಿಗೆ ಒದಗಿಸಿರುವ ವೆಂಟಿಲೇಟರ್‌ಗಳ ವಿವರ ಈ ಕೆಳಕಂಡಂತಿವೆ.

ಆಸ್ಪತ್ರೆಯ ಹೆಸರು	ವೆಂಟಿಲೇಟರ್‌ಗಳ ವಿವರ
ಎಸ್. ಎನ್. ಆರ್. ಜಿಲ್ಲಾ ಆಸ್ಪತ್ರೆ, ಕೋಲಾರ	20
ಸಾರ್ವಜನಿಕ ಆಸ್ಪತ್ರೆ, ಬಂಗಾರಬೇಟೆ	5
ಸಾರ್ವಜನಿಕ ಆಸ್ಪತ್ರೆ, ಶ್ರೀನಿವಾಸಪುರ	5
ಸಾರ್ವಜನಿಕ ಆಸ್ಪತ್ರೆ, ಕೆ. ಜಿ. ಎಫ್	5
ಸಾರ್ವಜನಿಕ ಆಸ್ಪತ್ರೆ, ಮುಳಬಾಗಿಲು	5
ಸಾರ್ವಜನಿಕ ಆಸ್ಪತ್ರೆ, ಮಾಲೂರು	5

ಕ್ರ ಸಂ	ಪ್ರಶ್ನೆಗಳು	ಉತ್ತರ
ಆ)	ಕೋಲಾರ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಯಾವ ಯಾವ ಖಾಯಿಲೆಗಳ ಚಿಕಿತ್ಸೆಗಾಗಿ ವಿಶೇಷ ಘಟಕಗಳನ್ನು ಸ್ಥಾಪನೆ ಮಾಡಲಾಗಿದೆ. (ವಿವರ ನೀಡುವುದು)	ಎನ್. ಸಿ. ಡಿ ಕಾರ್ಯಕ್ರಮದ ಭಾಗವಾಗಿ 3 ಮುಖ್ಯ ಘಟಕಗಳು ಕೋಲಾರ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. 1. ಜಿಲ್ಲಾ ಎನ್. ಸಿ. ಡಿ ಕ್ಲಿನಿಕ್: ಜಿಲ್ಲಾ ಆಸ್ಪತ್ರೆಗೆ ಯಾವುದೇ ಕಾರಣಕ್ಕೆ ಚಿಕಿತ್ಸೆಗಾಗಿ ಆಗಮಿಸುವ 30 ವರ್ಷ ಮೇಲ್ಪಟ್ಟ ಎಲ್ಲರಿಗೂ ರಕ್ತದೊತ್ತಡ, ಮಧುಮೇಹ ಮತ್ತು 3 ಮುಖ್ಯ ಕ್ಯಾನ್ಸರ್ (ಸ್ತನ ಕ್ಯಾನ್ಸರ್, ಗರ್ಭಕಂಠದ ಕ್ಯಾನ್ಸರ್ ಮತ್ತು ಬಾಯಿ ಕ್ಯಾನ್ಸರ್)ಗಳಿಗೆ ಪೂರ್ವಭಾವಿ ತಪಾಸಣೆ ಕೈಗೊಳ್ಳಲಾಗುವುದು. ರೋಗ ಖಾತ್ರಿಯಾದವರಿಗೆ ಅಗತ್ಯ ಚಿಕಿತ್ಸೆ ನೀಡಿ, ಮುಂದುವರೆಸುವ ಬಗ್ಗೆ ಅನುಪಾಲನೆ ಮಾಡಲಾಗುವುದು. (ಪ್ರತ್ಯೇಕ ಮಾನವ ಸಂಪನ್ಮೂಲವನ್ನು ಆರೋಗ್ಯ ಅಭಿಯಾನದಿಂದ ಒದಗಿಸಲಾಗಿದೆ). 2. ಹಿರಿಯರ ಆರೈಕೆ ಘಟಕ: 60 ವರ್ಷಕ್ಕೂ ಮೇಲ್ಪಟ್ಟ ಹಿರಿಯರಿಗೆ ಏಕಗವಾಕ್ಷಿ ಮಾದರಿಯಲ್ಲಿ ಚಿಕಿತ್ಸೆ ನೀಡಲು ಹಿರಿಯರ ಆರೋಗ್ಯ ಘಟಕವನ್ನು ಜಿಲ್ಲಾ ಆಸ್ಪತ್ರೆ ಮಟ್ಟದಲ್ಲಿ ಸ್ಥಾಪಿಸಲಾಗಿದೆ. ಹಿರಿಯರಿಗೆ ಹೊರರೋಗಿ ಸೇವೆ, ಒಳರೋಗಿ ಸೇವೆಗಳು, ಪ್ರಯೋಗಶಾಲಾ ಪರೀಕ್ಷೆ ಮತ್ತು ಭೌತಿಕ ಚಿಕಿತ್ಸೆಗೆ ಇಲ್ಲಿ ವ್ಯವಸ್ಥೆ ಇರುತ್ತದೆ. (ಪ್ರತ್ಯೇಕ ಮಾನವ ಸಂಪನ್ಮೂಲವನ್ನು ಆರೋಗ್ಯ ಅಭಿಯಾನದಿಂದ ಒದಗಿಸಲಾಗಿದೆ).

<table>
<tr>
<td></td>
<td></td>
<td>
3. ಜಿಲ್ಲಾ ಮಟ್ಟದ ಉಪಶಾಮಕ ಚಿಕಿತ್ಸಾ ಘಟಕ: ಕ್ಯಾನ್ಸರ್, ಪಾರ್ಶ್ವವಾಯು, ಮೂತ್ರಪಿಂಡದ ವೈಫಲ್ಯ, ಹೃದಯರೋಗ ಮತ್ತು ವಯೋಸಹಜ ದುರ್ಬಲತೆಯಿಂದ ನಿತ್ರಾಣ ಸ್ಥಿತಿಯಲ್ಲಿರುವ ಮತ್ತು ವಾಸಿಯಾಗಲಾರದ ಸ್ಥಿತಿಯಲ್ಲಿರುವ, ಹಾಸಿಗೆ ಹಿಡಿದಿರುವ ರೋಗಿಗಳಿಗೆ ಉಪಶಾಮಕ ಆರೈಕೆ ನೀಡುವ ಸಲುವಾಗಿ ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ.

1. ನವಜಾತ ಶಿಶುಗಳ ಆರೈಕೆಗಾಗಿ ಎಸ್. ಎನ್. ಸಿ. ಯು ವಿಭಾಗ,
2. ಡಯಾಲಿಸಿಸ್ ರೋಗಿಗಳ ಚಿಕಿತ್ಸೆಗಾಗಿ ಡಯಾಲಿಸಿಸ್ ವಿಭಾಗ,
3. ಮೂತ್ರಕೋಶಕ್ಕೆ ಸಂಬಂಧಿಸಿದ ರೋಗಗಳಿಗೆ ಯುರಾಲಜಿ ವಿಭಾಗ,
4. ಎನ್.ಆರ್.ಸಿ ವಿಭಾಗ,
5. ಹೆಚ್. ಐ. ವಿ ಸೋಂಕಿತ ರೋಗಗಳ ಚಿಕಿತ್ಸೆ ಎ.ಆರ್ .ಟಿ ವಿಭಾಗ,
6. ಕ್ಷಯರೋಗ ನಿಯಂತ್ರಣ ಘಟಕ,
7. ಪಂಚಕರ್ಮ ವಿಭಾಗ,
8. ಯುನಾನಿ ವಿಭಾಗ,
9. ಡಿ.ಇ.ಐ.ಸಿ ಚಿಕಿತ್ಸಾ ವಿಭಾಗ,
10. ಮಾನಸಿಕ ರೋಗಿಗಳಿಗೆ ಕೌನ್ಸಲಿಂಗ್ ಮತ್ತು ಚಿಕಿತ್ಸೆ ನೀಡಲಾಗಿದೆ.
11. ಜಾಯಿಂಟ್ ಕ್ಲಿನಿಕ್,
</td>
</tr>
<tr>
<td>ಇ)</td>
<td>ಕೋಲಾರ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳು ಎಷ್ಟು; ಈ ಆಸ್ಪತ್ರೆಗಳಿಗೆ ಮಂಜೂರಾಗಿರುವ ಹುದ್ದೆಗಳು ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>
ಕೋಲಾರ ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳು ಈ ಕೆಳಕಂಡಂತೆ ಕಾರ್ಯನಿರ್ವಹಿಸುತ್ತಿವೆ.

<table>
<tr><td>ಪ್ರಾಥಮಿಕ ಆರೋಗ್ಯ ಕೇಂದ್ರಗಳು</td><td>69</td></tr>
<tr><td>ಸಮುದಾಯ ಆರೋಗ್ಯ ಕೇಂದ್ರಗಳು</td><td>02</td></tr>
<tr><td>ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು</td><td>04</td></tr>
<tr><td>ಜಿಲ್ಲಾ ಆಸ್ಪತ್ರೆ</td><td>01</td></tr>
<tr><td>ಆರೋಗ್ಯ ವಿಸ್ತರಣಾ ಘಟಕಗಳು</td><td>05</td></tr>
</table>

ಕೋಲಾರ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಮಂಜೂರಾಗಿರುವ ಹುದ್ದೆಗಳು ಮತ್ತು ಪ್ರಸ್ತುತ ಖಾಲಿಯಿರುವ ಹುದ್ದೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
</td>
</tr>
</table>

ಸಂಖ್ಯೆ: ಆಕುಕ 24 ಎಸ್.ಟಿ.ಕ್ಯೂ 2022

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕೋಲಾರ ಇವರ ಅಧೀನದಲ್ಲಿ ಬರುವ ವಿವಿಧ ವೃಂದಗಳ ಮಂಜೂರಾತಿ, ಕಾರ್ಯನಿರತ ಹಾಗೂ ಖಾಲಿ ಹುದ್ದೆಗಳ ಮಾಹಿತಿ. ದಿನಾಂಕ: 09.03.2022

ಕ್ರ.ಸಂ	ಪದನಾಮ	ಮಂಜೂರಾತಿ	ಕಾರ್ಯನಿರತ	ಖಾಲಿ	ಷರಾ
1	ವೈದ್ಯಾಧಿಕಾರಿಗಳು	181	153	28	
2	ಗ್ರೂಪ್ 'ಬಿ' ಅಧಿಕಾರಿಗಳು	9	8	1	
3	ಕಛೇರಿ ಅಧೀಕ್ಷಕರು	7	7	0	
4	ಪ್ರಥಮ ದರ್ಜೆ ಸಹಾಯಕರು	62	42	20	
5	ದ್ವಿತೀಯ ದರ್ಜೆ ಸಹಾಯಕರು	30	15	15	
6	ಉಪ ಜಿಲ್ಲಾ ಶಿಕ್ಷಣಾಧಿಕಾರಿಗಳು	2	0	2	
7	ನೇತ್ರಾಧಿಕಾರಿ	14	8	6	
8	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು	21	7	14	
9	ಶೀಘ್ರಲಿಪಿಗಾರರು	1	0	1	
10	ಹಿರಿಯ ಟೈಪಿಸ್ಟ್	1	0	1	
11	ಕಿರಿಯ ಟೈಪಿಸ್ಟ್	2	1	1	
12	ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು	56	43	13	
13	ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರು	8	5	3	
14	ಹಿರಿಯ ಫಾರ್ಮಸಿ ಅಧಿಕಾರಿ	6	3	3	
15	ಫಾರ್ಮಸಿ ಅಧಿಕಾರಿ	74	54	20	
16	ಕ್ಷ-ಕಿರಣ ತಂತ್ರಜ್ಞರು	10	8	2	
17	ಫಿಜಿಯೋಥೆರಪಿಸ್ಟ್	1	0	1	
18	ರೆಫ್ರಿಜೇಟರ್ ಮೆಕಾನಿಕ್	1	0	1	
19	ಕ್ಲರ್ಕ್ ಕಂ ಟೈಪಿಸ್ಟ್	10	0	10	
20	ಚಲನಚಿತ್ರ ಪ್ರದರ್ಶಕರು	1	0	1	
21	ಸಹಾಯಕ ಸಾಂಖ್ಯಿಕ ಅಧಿಕಾರಿಗಳು	2	0	2	
22	ಸ್ಕಿಲ್ಡ್ ಅಸಿಸ್ಟೆಂಟ್	2	0	2	
23	ಸ್ಕಿಲ್ಡ್ ಟ್ರೇಡ್‌ಮನ್	1	0	1	
24	ಮಾಸ್ಟರ್ ಆರ್ಟಿಸರ್ಜನ್	1	0	1	
25	ವಾಹನ ಚಾಲಕರು	48	27	21	
26	ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ	284	124	160	
27	ಆರೋಗ್ಯ ನಿರೀಕ್ಷಣಾಧಿಕಾರಿ	134	57	77	
28	ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ	52	20	32	
29	ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ	43	11	32	
30	ಶುಶ್ರೂಷಣಾಧಿಕಾರಿ	124	96	28	
31	ಹಿರಿಯ ಶುಶ್ರೂಷಣಾಧಿಕಾರಿ	2	0	2	
32	ಆರೋಗ್ಯ ಮೇಲ್ವಿಚಾರಕರು	2	0	2	
33	ಗ್ರೂಪ್-ಡಿ	318	109	209	
	ಒಟ್ಟು	1510	798	712	

ಕೋಲಾರ ಜಿಲ್ಲೆಯಲ್ಲಿರುವ ಆಸ್ಪತ್ರೆಗಳ ವಿವರ

ಕ್ರ.ಸಂ	ಆಸ್ಪತ್ರೆಯ ಹೆಸರು	ಸಂಖ್ಯೆ	ಷರಾ
1	ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ	1	
2	ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು	5	
3	ಸಮುದಾಯ ಆರೋಗ್ಯ ಕೇಂದ್ರಗಳು	2	
4	ಪ್ರಾಥಮಿಕ ಆರೋಗ್ಯ ಕೇಂದ್ರಗಳು	66	